MVC No.174/2024
PW-1 ರಾಧಮ್ಮ
Date: 25.09.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಎದುರುದಾರರ ಪರ ಶ್ರೀ ಎಂ ಸಿ ಆರ್ ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಆ ಕಾರಣ ಅಪಘಾತ ಯಾರ ತಪ್ಪಿನಿಂದ ಉಂಟಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ನನ್ನ ಗಂಡನ ತಪ್ಪಿನಿಂದಲೇ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತಿಂಗಳಿಗೆ 20 ಸಾವಿರ ರೂಪಾಯಿ ಆದಾಯ ಕೂಲಿ ಕೆಲಸದಿಂದ ಬರುತ್ತಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಐಷರ್ ವಾಹನ ವಿಮೆಗೆ ಒಳಪಟ್ಟಿತ್ತು ಮತ್ತು ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ 1 ನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾಧ್ಯಸ್ತಿಕೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಯಾವುದೇ ಮಾಹಿತಿಇರದಿದ್ದರೂ ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಎದುರುದಾರರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ